**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1145/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಯಮುನಾ ಜಿ.ಎಸ್. | ಪ್ರಾಸಾಃ 3 |
| ತಂದೆಯ ಹೆಸರು | | ಸಿದ್ದಲಿಂಗಯ್ಯ | ಚಾಸಾಃ 2 |
| ವಯಸ್ಸು | | 42 ವರ್ಷ | |
| ಕೆಲಸ | | ಅಬಕಾರಿ ನಿರೀಕ್ಷಕರು , united Breviaries, ನಂಜನಗೂಡು | ಸಾ ಪ್ರ ಬೋ |
| ವಾಸ | | ಮೈಸೂರು | ದಿಃ 19.12.2022 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು 2009 ರಿಂದ ಆಗಸ್ಟ್, 2014 ರವರೆಗೂ ಅಬಕಾರಿ ನಿರೀಕ್ಷಕರಾಗಿ Ms// Bannari Amman Sugars Limited Distillery unit, Nanjangudu ರಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ-1, 3 ರಿಂದ 5 ಗೊತ್ತು. ದಿನಾಂಕ 27.06.2014 ರಂದು ಮಧ್ಯಾಹ್ನ 2.15 ಗಂಟೆಗೆ ನಾನು, ಚಾಸಾ-1, ಚಾಸಾ-3 ರಿಂದ 5 ರವರು ಕರ್ತವ್ಯಕ್ಕೆ ಹಾಜರಾಗಲು ಇಲಾಖಾ ವಾಹನ ಸಂಖ್ಯೆ KA-03-Z-4792 ರಲ್ಲಿ ಚಾಲಕರಾದ ಸಿದ್ದರಾಜು ರವರೊಂದಿಗೆ ಹೋಗುತ್ತಿದ್ದಾಗ ಬನ್ನಾರಿ ಅಮ್ಮನ್ ಶುಗರ್ ಫ್ಯಾಕ್ಟರಿಯ ಮುಖ್ಯ ದ್ವಾರದ ಬಳಿ ಸುಮಾರು 50-60 ಜನರು ಕೆಲವರನ್ನು ಕೆಲಸದಿಂದ ತೆಗೆದದಕ್ಕೆ ಧರಣಿ ಕುಳಿತಿದ್ದರು. ಕೆಲವು ಹೆಂಗಸರು ಅಕ್ರಮ ಗುಂಪು ಕಟ್ಟಿಕೊಂಡು ಬಂದು ನಮ್ಮನ್ನು ಮುಖ್ಯದ್ವಾರದ ಬಳಿ 1 ರಿಂದ 7 ಆರೋಪಿತರು ನಮ್ಮನ್ನು ಒಳಗೆ ಹೋಗದಂತೆ ತಡೆದಿರುತ್ತಾರೆ. ನಾವು ಅವರುಗಳಿಗೆ ನಾವು ಸರ್ಕಾರಿ ನೌಕರರಾಗಿದ್ದು ನಮ್ಮನ್ನು ಒಳ ಹೋಗಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಡಿ ಎಂದು ಕೇಳಿದೆವು. ಅದಕ್ಕೆ 8 ರಿಂದ 29 ನೇ ಆರೋಪಿತರು 1 ರಿಂದ 7 ನೇ ಆರೋಪಿತರಿಗೆ ಯಾವುದೇ ಕಾರಣಕ್ಕೂ ಒಳ ಹೋಗಲು ಬಿಡಬೇಡಿ ಎಂದು ಕುಮ್ಮಕ್ಕು ನೀಡಿದರು. ಆರೋಪಿತರ ಕೃತ್ಯದಿಂದ್ದಾಗಿ ನಮ್ಮ ಸರ್ಕಾರಿ ಕೆಲಸಕ್ಕೆ ಅಡ್ಡಿ ಪಡಿಸಿರುತ್ತಾರೆ. ಈ ಬಗ್ಗೆ ಚಾಸಾ-1 ರವರು ಬದನವಾಳು ಪೊಲೀಸ್ ಠಾಣೆಗೆ 1 ರಿಂದ 29 ಆರೋಪಿತರ ವಿರುದ್ಧ ದೂರು ನೀಡಿರುತ್ತಾರೆ.

ಘಟನೆಯ ಮಾರನೇ ದಿನ ನಾನು ಕೃತ್ಯ ನಡೆದ ಸ್ಥಳವನ್ನು ಪೊಲೀಸರಿಗೆ ತೋರಿಸಿದ ಮೇರೆಗೆ ಅವರು ನನ್ನ ಮತ್ತು ಚಾಸಾ-3 ಮತ್ತು 4 ರವರ ಸಮಕ್ಷಮ ಬೆಳಗ್ಗೆ 11.00 ರಿಂದ 11.45 ರವರೆಗೆ ಹಿಂದಿನ ದಿನದ ಕೃತ್ಯದ ವಿಚಾರವಾಗಿ ಸ್ಥಳ ಪಂಚನಾಮೆ ಜರುಗಿಸಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ಸ್ಥಳ ಪಂಚನಾಮೆಯಾಗಿದ್ದು, ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ)

ಎಂದು ಗುರುತಿಸಲಾಯಿತು.

ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

1 ರಿಂದ 7, 9 ಮತ್ತು 16 ನೇ ಆರೋಪಿತರು ಗೈರು ಹಾಜರು ಇದ್ದು, ಆರೋಪಿತರ ಗುರುತಿಸುವಿಕೆಯ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಇರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಪ್ರಕರಣದ ಸಂಬಂಧ ದಿನಾಂಕ 28.06.214 ರಂದು ಚಾಸಾ-11 ರವರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಎಂ.ಎಸ್. ವಕೀಲರಿಂದಃ**

ನನಗೆ ಬನ್ನಾರಿ ಅಮ್ಮನ್ ಶುಗರ್ ಫ್ಯಾಕ್ಟರಿಯ ಡಿಸ್ಟಿಲರಿ ವಿಭಾಗದ ಬಗ್ಗೆ ಚೆನ್ನಾಗಿ ಗೊತ್ತು. ನಮ್ಮ ಡಿಸ್ಟಿಲರಿ ಒಂದೇ ಕಾಂಪೋಂಡ್ ನಲ್ಲಿ ಪ್ರತ್ಯೇಕವಾಗಿದೆ. ನಮ್ಮ ಡಿಸ್ಟಿಲರಿಯಿಂದ ಸಕ್ಕರೆ ಕಾರ್ಖಾನೆಯ ಉತ್ಪದನಾ ಘಟಕ ಸುಮಾರು 1 ಕಿ.ಮೀಟರ್ ಅಂತರದಲ್ಲಿ ಇದೆ. ಮುಖ್ಯ ದ್ವಾರದಿಂದ ಒಳಗೆ ಬಂದು ಬಲಕ್ಕೆ ಹೋದರೆ ನಮ್ಮ ಡಿಸ್ಟಲರಿ ಇದೆ ಎಂದರೆ ಸರಿ. ಮುಖ್ಯ ದ್ವಾರದಿಂದ ನೇರವಾಗಿ ಹೋದರೆ ಇನ್ನೊಂದು ಗೇಟ್ ಇದ್ದು ಅದರ ಒಳಗೆ ಸಕ್ಕರೆ ಕಾರ್ಖಾನೆಯ ಉತ್ಪಾದನ ಘಟಕ ಇದೆ ಎಂದರೆ ಸರಿ. ಸಾಮಾನ್ಯವಾಗಿ ಒಳಭಾಗದ ಗೇಟ್ ನಲ್ಲಿ ಮುಷ್ಕರ ಮಾಡುತ್ತಾರೆ ಎಂದರೆ ಸರಿಯಲ್ಲ.

ನಮ್ಮ ದೈನಂದಿನ ಕಛೇರಿ ಅವಧಿ ಬೆಳಗ್ಗೆ 10.00 ರಿಂದ 5.30. ಸಾಕ್ಷಿ ಮುಂದುವರೆದು ಕೃತ್ಯ ನಡೆದ ಕಾಲಕ್ಕೆ ನಾನು ಮತ್ತು ಚಾಸಾ-1 United Breviaries Distillery ಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ಇದ್ದೆವು ಎಂದು ನುಡಿಯುತ್ತಾರೆ. ಪುನಃ ಸಾಕ್ಷಿ ಮುಂದುವರೆದು ಆ ಕಾಲಕ್ಕೆ ಮೈಸೂರಿನಲ್ಲಿ ಅಬಕಾರಿ ಉಪನಿರೀಕ್ಷಕರ ನೇಮಕ ಪ್ರಕ್ರಿಯೆಯಲ್ಲಿ ಕೂಡ ಭಾಗಿಯಾಗಿದ್ದೆವು ಎಂದು ನುಡಿಯುತ್ತಾರೆ. ನನಗೆ ಸಕ್ಕರೆ ಕಾರ್ಖನೆಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಕ್ಕರೆ ಕಾರ್ಖನೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ವೈಯಕ್ತಿಕ ಪರಿಚಯ ಇಲ್ಲ. ಸುಮಾರು 500-600 ಜನ ಗ್ರಾಮಸ್ಥರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು ಎಂದರೆ ಸರಿಯಲ್ಲ. ನಮ್ಮನ್ನು ತಡೆದವರ ಹೆಸರುಗಳು ನಮಗೆ ಚಾಸಾ-3 ಮತ್ತು 4 ರವರಿಂದ ತಿಳಿದುಬಂತು. ಚಾಸಾ-3 ಮತ್ತು 4 ರವರು ಆರೋಪಿತರ ಹೆಸರುಗಳನ್ನು ತಿಳಿಸಿದ ಆಧಾರದ ಮೇಲೆ ನಾನು ನನ್ನ ಹೇಳಿಕೆ ನೀಡಿದ್ದೇನೆ. ಮುಷ್ಕರದಲ್ಲಿ ಪಾಲ್ಗೊಂಡಿದ್ದ 50-60 ಜನರ ಹೆಸರು ವಿಳಾಸ ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ನಮ್ಮ ವಾಹನವನ್ನು ತಡೆಗಟ್ಟಿಲ್ಲ ಮತ್ತು ನಮ್ಮನ್ನು ಒಳಹೋಗದಂತೆ ಅಡ್ಡಗಟ್ಟಿ ನಮ್ಮಗಳ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ಮಹಿಳಾ ಆರೋಪಿತರು ವೈಯಕ್ತಿಕವಾಗಿ ನಮಗೆ ಪರಿಚಯ ವಿಲ್ಲ. ನಮ್ಮ ಸಿಬ್ಬಂದಿಯವರ ಮೂಲಕ ಅವರ ಹೆಸರು ವಿಳಾಸ ಗೊತ್ತಾಗಿದೆ. ಕಂಪನಿಯ ಆಡಳಿತ ಮಂಡಳಿಯವರ ಮಾತನ್ನು ಕೇಳಿ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇವೆ ಎಂದರೆ

ಸರಿಯಲ್ಲ. ಆರೋಪಿತರು ಅಪರಾಧವನ್ನು ಎಸಗಲು ಕುಮ್ಮಕ್ಕು ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಪೂರಕವಾಗುವಂತೆ ಪಂಚನಾಮೆಯನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**